ದಿನಾಂಕಃ 18.06.2024
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

<u>ಪಾಟೀ ಸವಾಲುಃ ವಾದಿ ಪರ ಶ್ರೀ. ಸಿ ಎಂ ಕೆ ., ವಕೀಲರಿಂದಃ</u>

2. ದಾವಾ ಸ್ವತ್ತು ಸರ್ವೆ ನಂ.31/2 ಒಟ್ಟು 4 ಎಕರೆ 19 ಗುಂಟೆ ಪಿತ್ರಾರ್ಜಿತ ಸ್ವತ್ತಾಗಿದ್ದು, ಅದರಲ್ಲಿ ನನ್ನ ತಂದೆ ಭಾಗಕ್ಕೆ 2 ಎಕರೆ 9 ಗುಂಟೆ ಬಂದಿದೆ ಎಂದರೆ ಸರಿ. ಉಳಿದ 2 ಎಕರೆ 10 ಗುಂಟೆ ಏನಾಯಿತೋ ಗೊತ್ತಿಲ್ಲ. ದಾವಾ ಸ್ವತ್ತುಗಳು ನಮ್ಮ ತಂದೆಗೆ ಪಿತ್ರಾರ್ಜಿತವಾಗಿ ಬಂದ ಸ್ವತ್ತುಗಳು ಎಂದರೆ ಸಾಕ್ಷಿ ನಮ್ಮ ತಂದೆ ಖರೀದಿ ಮಾಡಿದ ಸ್ವತ್ತುಗಳು ಎಂದು ನುಡಿಯುತ್ತಾರೆ. ನಮ್ಮ ತಂದೆ ಖರೀದಿ ಮಾಡಿದ್ದರು ಎಂದು ಹೇಳಲು ದಾಖಲಾತಿಗಳು ಇದೆಯೇ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಮನೆಯಲ್ಲಿ ಕೇಳಬೇಕು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ.

3. ದಿಃ 26.02.2011 ರ ನಿ ಪಿ 3 ದಾನಪತ್ರದ ಪತ್ರವನ್ನು ಯಾರು ಖರೀದಿ ಮಾಡಿ ತಂದದ್ದು ನಮ್ಮ ಮನೆಯವರು. ನಿಪಿ.3 ರಲ್ಲಿ ಪಿತ್ರಾರ್ಜಿತ ಸ್ವತ್ತು ಎಂದು ನಮೂದು ಇದೆ ಎಂದರೆ ಗೊತ್ತಿಲ್ಲ. ನಿಪಿ.3 ನ್ನು ಮಾಡಿಸಿದ್ದು ನಮ್ಮ ಯಜಮಾನರು. ನನಗೆ ಖುದ್ದಾಗಿ ಕೇಸಿನ ಬಗ್ಗೆ ಮಾಹಿತಿ ಇಲ್ಲ. ಪ್ರಸ್ತುತ ದಾವೆಯ ಬಗ್ಗೆ ಮತ್ತು ದಾಖಲಾತಿಗಳ ಬಗ್ಗೆ ನನಗೆ ಏನೂ ಗೊತ್ತಿಲ್ಲ.

(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.)

<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಚನ್ನಪಟ್ಟಣ.